ಮನವಿಗಳು.—

ಎಮ್. ಎಸ್. ರಾಮಯ್ಯ ಕಾಲೇಜಿನಲ್ಲಿ ವಿದ್ಯಾರ್ಥಿಯ ರ್ಯಾಂಗಿಂಗ್ ಬಗ್ಗೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ರೂಲ್ ೩೩ರ ಕೆಳಗೆ ಸುಮಾರು ಐದು ಸೂಚನೆಗಳನ್ನು ಕಳುಹಿಸಿದ್ದಾರೆ. ಎಲ್ಲವನ್ನೂ ನಾವು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಹಿಂದಿನ ಸಾರಿ ನಾನು ಇದರ ಬಗ್ಗೆ ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ. ದಿವಸಕ್ಕೆ ಒಂದನ್ನು ತೆಗೆದುಕೊಳ್ಳುವುದೂ ಎಂದು ಹೇಳಲಾಗಿದೆ,

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ಈ ವಿಚಾರವನ್ನು ತಾವು ಸಭೆಯಲ್ಲಿ ತಿಳಿಸಿದಾಗ, ಪುನಃ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದು ಚರ್ಚೆಯಾಗಿ, ನಮಗೆ ತಾವು ಅವಕಾಶ ಕೊಡುವುದಾಗಿ ತಿಳಿಸಿದ್ದೀರಿ. ಆದರಂತೆ ನಾವು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಕೇವಲ ಒಂದನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದಂ ಬಹಳ ಹಳೆಯ ತೀರ್ಮಾನ. ದಯವಿಟ್ಟು ತಾವು ಇದನ್ನು ನೆನಪು ಮಾಡಿಕೊಳ್ಳಬೇಕು.

ಅಧ್ಯಕ್ಷರು.—ನಾನು ಒಂದಕ್ಕಿಂತ ಹೆಚ್ಚು ೩೩ರ ನೋಟೀಸ್‌ಗಳನ್ನು ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಾರೆ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ತಾವು ಜಾಸ್ತಿ ಸೂಚನೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಲೇಬೇಕು. ಹಿಂದಿನ ಸದನದಲ್ಲಿಯೇ ನಾವು ಇದನ್ನು ಜಾರಿಗೆ ತಂದಿದ್ದೇವೆ.

ಅಧ್ಯಕ್ಷರು.—ನಾನು ಒಂದಕ್ಕಿಂತ ಹೆಚ್ಚು ನೋಟೀಸ್‌ಗಳನ್ನು ತೆಗೆದುಕೊಳ್ಳಲಾರೆ.

ಶ್ರೀ ಎಸ್. ಬಂಗಾರಪ್ಪ.—ತಾವು ಈ ರೀತಿಯಾಗಿ ಆಫ್ ಹ್ಯಾಂಡ್ ಆಗಿ ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನನಗೆ ೩೩ರ ನೋಟೀಸ್‌ಗಳು ಯಾರು ಯಾರಿಂದ ಬಂದಿವೆ ಅವರ ಹೆಸರನ್ನು ಕರೆಯುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಸದಸ್ಯರಾದ ಉಗ್ರನರಸಿಂಹಪ್ಪನವರು ತಮ್ಮ ಹೇಳಿಕೆಯನ್ನು ಕೊಡಬೇಕಂ ಎಂದು ಎದ್ದು ನಿಂತಿದ್ದಾರೆ ಅವರಿಗೆ ತಾವು ಅಪ್ಪಣೆಯನ್ನು ಕೊಡಬೇಕು:

(ಗೊಂದಲ)

ಅಧ್ಯಕ್ಷರು.—ನಮಗೆ ಅವರಿಂದ. ಅವರು ಹೇಳಿಕೆಯನ್ನು ಕೊಡುವ ಬಗ್ಗೆ ನೋಟೀಸ್ ಬಂದಿಲ್ಲ.

ಶ್ರೀ ಬೈರಪ್ಪಾಜಿ.—ಮಾನ್ಯ ಸದಸ್ಯರಿಗೆ ಏನೇನು ತೊಂದರೆಯಾಗಿದೆ ಎನ್ನುವುದನ್ನು ಹೇಳುವುದಕ್ಕೆ ನಿಂತಿದ್ದಾರೆ ತಾವು ಅವರಿಗೆ ಅಪ್ಪಣೆ ಕೊಡಬೇಕು.

ಅಧ್ಯಕ್ಷರು.—ತಾವು ಅವರಿಗೆ ರೂಲ್ ೩೩ರ ಪ್ರಕಾರ ನೋಟೀಸನ್ನು ನಮಗೆ ಕಳುಹಿಸಲಿಕ್ಕೆ ತಿಳಿಸಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಕೃಷ್ಣನ್ ಅವರು ತಮ್ಮ ನೋಟೀಸ್‌ನ ಬಗ್ಗೆ ಪ್ರಸ್ತಾಪ ಮಾಡಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ರೂಲ್ ೩೩ರ ಪ್ರಕಾರ ಒಂದು ನೋಟೀಸನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಮಹದೇವ್ ಅವರು ಈ ರೀತಿಯಾಗಿ ನಿಂತಿದ್ದರೆ ಮತ್ತು ಹೇಳುವುದನ್ನೇ ಹೇಳುತ್ತಿದ್ದರೆ ನಾನು ಕಾನೂನಿನ ವ್ಯಾಪ್ತಿಯೊಳಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಮಹದೇವ್.—ಏನು ಬೇಕಾದರೂ ತೆಗೆದುಕೊಳ್ಳಿ ಸ್ವಾಮಿ ?

(ಗೊಂದಲ)

ಶ್ರೀ ವೈ. ರಾಮಕೃಷ್ಣ.—ತಾವು ಅವರಿಗೆ ಎರಡು ನಿಮಿಷ ಅವಕಾಶ ಕೊಟ್ಟಿದ್ದರೆ ಇದ್ದೆಲ್ಲಾ ಆಗುತ್ತಾ ಇರಲಿಲ್ಲ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕು. ಅವರು ಕಳೆದ ಮೂರು ದಿವಸದಿಂದ ಈ ಮನೆಯಲ್ಲಿ ಯಾವರೀತಿ ನಡೆದುಕೊಳ್ಳುತ್ತಿದ್ದಾರೆ, ಇಲ್ಲಿ ಅವರ ನಡವಳಿಕೆಗಳು ಯಾವರೀತಿ ಇವೆ ಎಂಬುದನ್ನು ನಾವು ನೋಡುತ್ತಿದ್ದೇವೆ, ಆದ್ದರಿಂದ ತಾವು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಕಳೆದ ೩ ದಿವಸಗಳಿಂದ ಇಲ್ಲಿ ಏನು ನಡೆಯುತ್ತಿದೆ.

(ಗೊಂದಲ)

MR. SPEAKER.—Nothing will go on record.

** ** **

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಮಹದೇವ್‌ರವರು ತಮಗೆ ಥ್ರಾಲೆಂಡ್ ವಾಡತಕ್ಕ ರೀತಿಯಲ್ಲಿ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ. ಈಗ ಆಗಿರತಕ್ಕ ವಿಚಾರವನ್ನು ತಾವು ಶಾಂತವಾದ ವಾತಾವರಣದಲ್ಲಿ ವಿಚಾರ ಮಾಡಬೇಕಾಗುತ್ತದೆ. ಇಲ್ಲಸಲ್ಲದ ಮಾತುಗಳನ್ನಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಈ ಸಭೆಯ ಕಾರ್ಯಕಲಾಪಗಳು ಶಾಂತವಾದ ವಾತಾವರಣದಲ್ಲಿ ನಡೆಯಬೇಕಾಗುವುದಲ್ಲ. ಮಾನ್ಯ ಸದಸ್ಯರ ಪರವಾಗಿ ಮಾತನಾಡತಕ್ಕ ಸದಸ್ಯರು ಕಾನೂನು ಪ್ರಕಾರ, ನಿಯಮಾವಳಿಯ ಚೌಕಟ್ಟಿನೊಳಗೆ ಮಾತನಾಡಬೇಕಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ತಾವೂ ಹೇಳಿದ್ದೀರಿ ನಿಯಮ ೩೫ ರ ಪ್ರಕಾರ ನನ್ನ ಹತ್ತಿರ ಬಂದಿರತಕ್ಕ ಎಲ್ಲ ನೋಟೀಸ್‌ಗಳನ್ನೂ ತಮ್ಮ ಮುಂದಿಡುತ್ತೇನೆ. ಈಗಾಗಲೇ ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಗ್ಗೆ ಮಾನ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಯಾರಾದರೂ, ಏನ್ನಾದರೂ ಕೇಳುವುದಿದ್ದರೆ ಕೇಳಬಹುದೆಂದು ಹೇಳಿದ್ದೀರಿ. ಅದರ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಕೇಳುವುದಿದ್ದರೆ ಕೇಳಬಹುದಿತ್ತು. ಈ ಮಧ್ಯೆ ಮಾನ್ಯ ಸದಸ್ಯರಾದ, ಮಹದೇವ್‌ರವರು, ಉಗ್ರ ನರಸಿಂಹಪ್ಪನವರ ಪರವಾಗಿ ಪ್ರಸ್ತಾಪ ಮಾಡಿ ಅವರ ವಿಚಾರವನ್ನ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಗ್ರಹದಿಂದ ಕೇಳಿದರು. ಅದಕ್ಕೆ ತಾವು ಏನು ಹೇಳಿದ್ದೀರಿ, ಈಗ ಇದು ಮುಂಗಿಯಲಿ ನಂತರ ತೆಗೆದುಕೊಳ್ಳುತ್ತೇವೆಂದು ಎಷ್ಟು ಹೇಳಿದರೂ ಕೂಡ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಅದಕ್ಕೆ ನೋಟೀಸ್ ಕಳುಹಿಸಿಕೊಡಿ. ಅದನ್ನು ನಾನು ನೋಡುತ್ತೇನೆ. ಒಂದು ವೇಳೆ ಈಗಲೇ ಬರೆದು ಕಳುಹಿಸಿಕೊಡುವುದಾದರೆ ಈಗಲೇ ಕಳುಹಿಸಿ ಕೊಡಿ ಎಂದು ಕೇಳಿದಿರಿ. ಈ ಸಭೆಯು ಪ್ರತಿಯೊಂದು ವಿಚಾರವೂ ಕೂಡ ಸಭೆಯ ನಿಯಮಾವಳಿಯ ಚೌಕಟ್ಟಿನಲ್ಲಿ ನಡೆಯಬೇಕೆಂದಿದೆ. ಆದರೆ ಇದಕ್ಕೆ ಯಾವುದೇ ಕಾನೂನೂ ಬೇಡ, ಅಧ್ಯಕ್ಷರ ಅಪ್ಪಣೆಯೂ ಬೇಡ, ಯಾವ ಸಂದರ್ಭದಲ್ಲಿ ಯಾವ ವಿಷಯವಸ್ತುವನ್ನು ಬೇಕಾದರೂ ತೆಗೆದುಕೊಂಡು ಮಾತನಾಡಬಹುದೆಂಬ ವಾದ ಬಹುಶಃ ಅವರದ್ದು ಇದೆ...

ಶ್ರೀ ಕೆ. ಹೆಚ್. ರಂಗನಾಥ್.—ಅವರದ್ದು ಎಂದರೆ ಯಾರದ್ದು ? ಅವರ ಹೆಸರನ್ನು ಹೇಳಿ..

ಶ್ರೀ ಎ. ಲಕ್ಷ್ಮೀಸಾಗರ್.—ಯಾರು ಹೇಳಿದರೋ ಅವರಿಗೆ ನಾನು ಹೇಳಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಪಾರ್ಲಿಮೆಂಟರಿ ಸಚಿವರು ಈರೀತಿ ಹೇಳಬಾರದು. ತಾವು ಇಲ್ಲಿ ಇದ್ದೀರೋ ? ಇಲ್ಲವೊ ? ಯಾರು ಆ ಮಾತನ್ನು ಹೇಳಿದರೂ ಅವರ ಹೆಸರನ್ನು ಹೇಳಿ

**Not recorded as ordered by the Chair.

ಶ್ರೀ ಎ. ಲಕ್ಷ್ಮೀಸಾಗರ್.—ವಿಷಯದಿಂದ ಹಿನ್ನೆಲೆಯಲ್ಲಿ ಪ್ರತಿಯೊಂದು ಸಾರಿಯೂ ಮಾನ್ಯ ಸದಸ್ಯರ ಹೆಸರನ್ನು ಹೇಳಬೇಕಾಗಿಲ್ಲ, ಪ್ರತಿಯೊಂದು ಸಾರಿ ನಾನಂ ಹೇಳುವಾಗಲೂ ಆ ಮಾನ್ಯ ಸದಸ್ಯರ ಹೆಸರನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಹೇಳುತ್ತೇನೆ. ಈ ವಿಷಯವನ್ನು ಯಾರು ಹೇಳಿದರೋ ಅವರಿಗೆ ನಾನು ಹೇಳಿದ್ದೇವೆಂದು ತಮಗೆ ಈಗಾಗಲೇ ಹೇಳಿದ್ದೇನೆ. ಈ ಸದಸದ ಎಲ್ಲ ಕಾರ್ಯ ಕಲಾಪಗಳೂ ಸದನದ ನಿಯಮಾವಳಿಯ ಚೌಕಟ್ಟಿನಲ್ಲಿ ನಡೆಯುಬೇಕೆಂದು

ಅಧ್ಯಕ್ಷರು.—ಮಾನ್ಯ ಸದಸ್ಯರಾದ ರಂಗನಾಥ್‌ರವರು ತಡವಾಗಿ ಬಂದಿದ್ದರಿಂದ ಇಲ್ಲಿ ಏನೆ ನಡೆಯಿತು ಎಂಬುದು ಅವರಿಗೆ ಗೊತ್ತಾಗಲಿಲ್ಲವೆಂದು ತಾಣುತ್ತದೆ. ಆದ್ದರಿಂದ ನಾನು ಅದನ್ನು ಹೇಳಬೇಕಾಗಿದೆ. ಒಬ್ಬ ಮಾನ್ಯ ಸದಸ್ಯರು ತಮ್ಮ ನೋಟೀಸಿನ ಬಗ್ಗೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿದರು...

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಅಪ್ಪಣೆ ಕೊಡುವುದಕ್ಕಾಗಿ ಇದ್ದೀರಿ. ಆದರೆ ತಮ್ಮ ಅಧಿಕಾರ ಮಾನ್ಯ ಸದಸ್ಯರಿಗೆ ಏನಾದರೂ ಇದ್ದರೆ ಅದನ್ನಾದರೂ ಹೇಳಲಿ. ಅವರಿಗೆ ಇದೆಯೆಂದು ಹೇಳಿದರೆ, ಆಗ ನಾವು ಕೂತುಕೊಳ್ಳುತ್ತೇವೆ. ಈ ಸದನದಲ್ಲಿ ತಾವು ಅಪ್ಪಣೆ ಕೊಟ್ಟರೆ ನಾವು ಕೂತು ಕೊಳ್ಳಬೇಕು. ಆದರೆ ಅವರು ಹೇಳಿದರೆ ನಾವು ಕೂತುಕೊಳ್ಳಬೇಕೆಂದು ಏನಾದರೂ ಇದೆಯೆ ? ಅವರು ಹೇಳಿದರೆ ನಾವು ಸುಮ್ಮನೆ ಕೂತುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಇನ್ನು ಎರಡನೆಯ ವಿಷಯ ಎಂದರೆ, ನಿಯಮ ೫೫ರ ಕೆಳಗೆ ಕಳುಹಿಸಿರತಕ್ಕ ವಿಚಾರ ಮುಂಗಿದ ಮೇಲೆ ನಿಮ್ಮ ಹೆಸರನ್ನು ತೆಗೆದುಕೊಳ್ಳುತ್ತೇನೆಂದು ನಾನು ಹೇಳಿದರೂ ಕೂಡ, ಅದನ್ನು ಈಗಲೇ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರಾದ ಮಹದೇವ್‌ರವರು ಹೇಳಿದರು ನಾನು ಎಷ್ಟು ಹೇಳಿದರೂ ಅದನ್ನು ಕೇಳದೆ ಅವರು ಹಾಗೆಯೇ ಮಾತನಾಡುತ್ತಿದರು. ಅವರು ಕೂತು ಕೊಳ್ಳಲೇ ಇಲ್ಲ. ಇವರಿಗೆ ತಾಳ್ಮೆ ಇರಲಿಲ್ಲ. ವಿಚಾರ ಏನು ಎಂಬುದನ್ನು ತಾವು ಈಗಲೇ ಬರೆದು ಕಳುಹಿಸಿಕೊಡಿ ಎಂದು ನಾನು ಹೇಳಿದ್ದೇನೆ. ಮತ್ತು ಈಗಲೂ ಹೇಳುತ್ತಿದ್ದೇನೆ. ಅನೇಕ ಸದಸ್ಯರ ವಿಚಾರಗಳು ಈಗ ಬಂದಿದ್ದರಿಂದ ಅವರ ವಿಷಯಗಳನ್ನೂ ಪಟ್ಟಿಯಲ್ಲಿ ಸೇರಿಸಿದ್ದೇನೆ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎದ್ದು ನಿಂತಿದ್ದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋದುದರಿಂದ ನಾನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ತಮಗೆ ಒಂದು ಪತ್ರವನ್ನೂ ಬರೆದಿದ್ದಾರೆ. ಅಲ್ಲದೆ ನಿಯಮ ೫೫ರ ಪ್ರಕಾರ ಅವರು ಯಾವ ವಿಚಾರವನ್ನು ಚರ್ಚೆಗೆ ಎತ್ತಿಕೊಳ್ಳಬೇಕೋ ಅದನ್ನು ಎತ್ತುತ್ತಾರೆ. ತಮಗೆ ಈಗಾಗಲೇ ಅವರು ಒಂದು ಪತ್ರವನ್ನೂ ಬರೆದಿದ್ದಾರೆ...

(ಗೊಂದಲ)

ಅಧ್ಯಕ್ಷರು.—ಮೊದಲು ಮಾನ್ಯ ಸದಸ್ಯರು ಮಾತನಾಡಿ ಮುಗಿಸಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸರ್ಕಾರದ ವತಿಯಿಂದ ಮಾನ್ಯ ಸಚಿವರು ಪೇಳಿಕೆಯನ್ನು ಕೊಡುವಾಗ ಯಾವ ಭಾಷೆಯಿಂದ ಪ್ರಾರಂಭ ಮಾಡುತ್ತಾರೋ ಅದೇ ಭಾಷೆಯಿಂದ ಕೊನೆ ಮಾಡ ಬೇಕೆಂದು ಒಂದು ನಿಯಮ ಇವೆ. ಆದರ ಭಾವನೆಯಾದರೂ ಏನು ? ಇದಕ್ಕೆ ನೋಟೀಸ್ ಕೊಡ ಬೇಕಾಗಿಲ್ಲ, ಈಗಾಗಲೇ ಮಾನ್ಯ ಅಧ್ಯಕ್ಷರಿಗೆ ಪತ್ರವನ್ನು ಬರೆದಿದಾ ರೆ. ಒಂದು ವೇಳೆ ನೋಟೀಸ್ ಕೊಡದಿದ್ದರೂ, ಸದನದಲ್ಲಿ ಆ ವಿಷಯವನ್ನು ಎತ್ತಲು ಅವಕಾಶ ಸಿಕ್ಕಿದಿದ್ದಾಗ ತಮ್ಮ ಗಮನವನ್ನು ಸೆಳೆದು ಅವರ ಅಭಿಪ್ರಾಯವನ್ನು ಕೊಡುವ ಹಕ್ಕು ಇದೆ. ಆದ್ದರಿಂದ ಅವರು ಮಾತನಾಡಲು ಎದ್ದು ನಿಂತರು ಒಬ್ಬ ಸದಸ್ಯರು ಮಾತನಾಡಲು ಎದ್ದು ನಿಂತಾಗ, ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅಸಕ್ತರಾದಾಗ ಬೇರೆ ಸದಸ್ಯರು ಅವರ ಪರವಾಗಿ ಎದ್ದು ನಿಂತರು.

ಇದು ಏಕಮುಖವಾಗಿ ಪ್ರಚೋದನೆಯಾದ್ದರಿಂದ ಇಲ್ಲಿ ಪ್ರಬಲವಾಗಿ ಚರ್ಚೆಯಾಗಿದೆ. ಸದನದ ಗೌರವ ವನ್ನು ಉಳಿಸಿಕೊಳ್ಳಲು ಯಾವ ರೀತಿ ವರ್ತನೆ ಮಾಡಬೇಕೆಂಬುದು ಎಲ್ಲರಿಗೂ ಕೂಡ ಗೊತ್ತಿರತಕ್ಕಂಥ ವಿಚಾರ. ಅದರಂತೆ ಮಾನ್ಯ ಸದಸ್ಯರಾದ ಮಹದೇವ್‌ರವರೂ ಕೂಡ ಮಾತನಾಡಲು ಸಿದ್ಧರಿದ್ದಾರೆ ಮತ್ತು ಮಾನ್ಯ ಉಗ್ರನರಸಿಂಹಪ್ಪನವರೂ ಕೂಡ ಸಿದ್ಧರಿದ್ದಾರೆ. ಮಾನ್ಯ ಸದಸ್ಯರಾದ ಉಗ್ರನರಸಿಂಹಪ್ಪ ನವರು ವೈಯಕ್ತಿವಾಗಿ ಹೇಳಿಕೆಯನ್ನು ಕೊಡಲು ಅವಕಾಶವನ್ನು ಕೇಳುತ್ತಿದ್ದಾರೆ, ಅವರ ಮನಸ್ಸಿಗೆ ಯಾತನೆ ಏನು ಆಗಿರುತ್ತದೆ ಅದನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ದಯವಿಟ್ಟು ಕೊಡಬೇಕೆಂದು

ಹೇಳುತ್ತೇನೆ. ಅವರು ಈ ವಿಷಯವನ್ನು ತಮ್ಮ ಗಮನಕ್ಕೆ ತಂದು ನೆಳೆಯಂವಾಗ ಗೊಂದಲವಾಗಿರುತ್ತದೆ. ಈ ಗೊಂದಲದ ಯಾವುದೋ ಒಂದು ನೆಪದಿಂದ ತಳ್ಳಿಹಾಕಲವಂತಿಲ್ಲ, ಕಾನೂನು ಚೌಕಟ್ಟಿನಲ್ಲಿ ಸದನದ ಕಾರ್ಯಕಲಾಪಗಳನ್ನು ಸೀಮಿತಗೊಳಿಸಿ ಸದಸ್ಯರ ಕಷ್ಟ ಏನು ಇದೆ ಅದನ್ನು ನಿವೇದನೆ ಮಾಡಿಕೊಳ್ಳಲಿಕ್ಕೆ ಅವಕಾಶವನ್ನು ತಾವು ಕೊಡಬೇಕು. ತಾವು ಅವರಿಗೆ ರಕ್ಷಣೆಯನ್ನು ಕೊಡಬೇಕಂ. ತಾವು ರಕ್ಷಣೆಯನ್ನು ಕೊಡದಿದ್ದರೆ ಮತ್ತೆ ಯಾರು ರಕ್ಷಣೆಯನ್ನು ಕೊಡುತ್ತಾರೆಂದು ಕೇಳಬೇಕಾಗುತ್ತದೆ. ಸರ್ಕಾರದವರು ರಕ್ಷಣೆಯನ್ನು ಕೊಡಲಿಲ್ಲವೆಂದರೆ ತಾವು ರಕ್ಷಣೆಯನ್ನು ಕೊಡಬೇಕಾದಂಥ ಪ್ರಸಂಗ ಬರುತ್ತದೆ. ಅಂಥ ಒಂದು ಅವಕಾಶವನ್ನು ತಾವು ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು —ತಾವು ಹೇಳಿದ ವಿಚಾರವನ್ನು ಪುನಃ ಪುನಃ ಹೇಳುತ್ತಾ ಇದ್ದೀರಿ. ಪ್ರಶ್ನೆಗಳು ಮುಂಗಿದ ತಕ್ಷಣವೇ ಶೂನ್ಯ ವೇಳೆಗೆ ಬರತಕ್ಕಂಥದ್ದು ಸಂಸತ್ತಿನ ವ್ಯವಹಾರವಾಗಿ ನಡೆದುಬಂದಿರುವ ಸಂಪ್ರದಾಯವಾಗಿತ್ತು. ಇದನ್ನು ಬದಲಾವಣೆ ಮಾಡಿ ಅದಕ್ಕಾಗಿಯೇ ನಿಯಮ ೩೩ಳಿ ಎಂದು ಮಾಡಿದ್ದಾರೆ. ೩೩ಳಿರ ನಿಯಮದಲ್ಲಿ ಇದನ್ನು ಸೇರಿಸಿದ್ದೇವೆ, ಈ ನಿಯಮ ಆದೇ ಕಾರಣಕ್ಕಾಗಿ ಬಂದಿದೆ, ೩೩ಳಿರ ಪ್ರಕಾರ ತಕ್ಷಣವೇ ತೆಗೆದುಕೊಳ್ಳಲು ನೋಟೀಸ್ ಕಳುಹಿಸಿಕೊಡಿ, ಇದು ಮುಂಗಿದ ತಕ್ಷಣವೇ ಅದನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಬೇಕಿದ್ದರೆ ರೆಕಾರ್ಡ್ಸ್ ತೆಗೆದು ನೋಡಿ ಆದ್ದರಿಂದ ಈಗಲೂ ಕೂಡ ಸಮಾಧಾನದಿಂದ ಕೇಳಿ, ಯಾವುದೇ ಹಠಕ್ಕೆ ಹೋಗುವುದು ಬೇಡವೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಬಹಳ ಮುಂಪ್ಯವಾದ ವಿಚಾರವನ್ನು ತಮ್ಮ ಮುಖಾಂತರ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಕಳೆದ ೧೦-೧೫ ದಿವಸಗಳಿಂದ ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ ರ‍್ಯಾಗಿಂಗ್ ಹಾವಳಿ ಶುರು ವಾಗಿದೆ,

ಅಧ್ಯಕ್ಷರು.—ಕನ್ನಡದಲ್ಲಿ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಕನ್ನಡದಲ್ಲಿ ಹೇಳಲು ಅದು ನನಗೂ ಕೂಡ ಗೊತ್ತಿಲ್ಲ. ಇದು ಹೇಗೆ ಎಂದರೆ ಯಾರು ಸೀನಿಯರ್ ಆಗಿರತಕ್ಕಂಥ ವಿದ್ಯಾರ್ಥಿಗಳು ಇರುತ್ತಾರೋ ಅವರು ಜೂನಿಯರ್ ವಿದ್ಯಾರ್ಥಿಗಳು ಎಂದರೆ ಹೊಸದಾಗಿ ಬಂದಿರತಕ್ಕಂಥ ಹುಡುಗರಿಗೆ ಬೆತ್ತಲೆಮಾಡಿ ಕತ್ತೆಯ ಮೇಲೆ ಕೂಳಿಸಿ ಮೆರವಣಿಗೆಯನ್ನು ಮಾಡುವುದು, ಬೇರೆ ಬೇರೆ ರೀತಿ ಅತ್ಯಾಚಾರ ಮಾಡುವುದಂ, ಇದೆಲ್ಲ ದುರ್‌ವರ್ತನೆಗಳಂ ನಡೆಯುತ್ತಾ ಬರುತ್ತಿದೆ. ಇದಂ ಹಿಂದೆಯೂ ಕೂಡ ನಡೆಯುತ್ತಿತ್ತು, ಈಗಲೂ ನಡೆಯುತ್ತಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಮ್ಮ ಕಾಲದಲ್ಲೂ ನಡೆಯುತ್ತಿತ್ತೇ ?

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಕಾಲದಲ್ಲಿ ಈ ರೀತಿ ನಡೆಯುತ್ತಿರಲಿಲ್ಲ. ನಾವು ಓದಂ ತ್ತಿರುವಾಗ ಈ ಪದವೇ ಗೊತ್ತಿರಲಿಲ್ಲ, ಇದರ ಬಗ್ಗೆ ಕಾನೂನಿನ ಚೌಕಟ್ಟಿನಲ್ಲಿ ಏನು ಮಾಡಬೇಕು ಎಂಬುದರ ಬಗ್ಗೆ ಸರ್ಕಾರ ಕೂಡ ಯೋಚನೆ ಮಾಡುತ್ತಾ ಇದೆ ಎಂದು ಹೇಳಿರುತ್ತಾರೆ. ಮೂಲ ಭೂತವಾಗಿ ಪ್ರಶ್ನೆ ಬಂದಿರುವುದು ಏನೆಂದರೆ ಈವತ್ತು ಹುಡುಗರು ಕಾಲೇಜುಗಳಿಗೆ ನೆಮ್ಮದಿಯಾಗಿ ಹೋಗುವುದಕ್ಕೆ ಆಗುತ್ತಿಲ್ಲ. ಅದರಲ್ಲೂ ಹೊಸದಾಗಿ ಸೇರತಕ್ಕಂಥವರಿಗೆ ಬಹಳ ದೊಡ್ಡದಾದ ಪ್ರಶ್ನೆ ಯಾಗಿದೆ. ಇದು ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಹುಡುಗಿಯರೂ ಕೂಡ ರ‍್ಯಾಗಿಂಗ್ ಮಾಡ ತಕ್ಕಂಥ ಮಟ್ಟಕ್ಕೆ ಹೋಗಿರುತ್ತದೆ. ಮೌಂಟ್ ಕಾರ್ಮಲ್ ಕಾಲೇಜ್‌ನಲ್ಲಿ ಮಾನ್ಯ ಗುಂಡುರಾಯರು ಮುಖ್ಯಮಂತ್ರಿಗಳಾಗಿದ್ದಾಗ ಅಲ್ಲೂ ಕೂಡ ರ‍್ಯಾಗಿಂಗ್ ನಡೆದಿರುತ್ತದೆಂದು ಕೇಳಲ್ಪಟ್ಟಿದ್ದೇವೆ. ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ ನಡೆಯುತ್ತಿರುವಂಥ ಈ ರ‍್ಯಾಗಿಂಗ್ ಏನಿದೆ, ಇದು ಒಂದು ಅನಾಗರೀಕ ವರ್ತನೆಯಾಗಿದೆ. ಇದರಿಂದ ಒಂದು ರೀತಿಯಾದ ನೈತಿಕ ಅಧಃಪತನಕ್ಕೆ ಹೋಗಿದೆ. ವಿದ್ಯಾರ್ಥಿಗಳ ವಿದ್ಯಾರ್ಜನೆ ಒಂದು ರೀತಿಯ ಅಧಃಪತನಕ್ಕೆ ಹೋಗುತ್ತಿರುವುದು ಬಹಳ ಶೋಚ ನೀಯವಾದ ವಿಷಯವಾಗಿದೆ. ನಿಜವಾಗಿಯೂ ವಿದ್ಯಾರ್ಜನೆಗೆ ಬರತಕ್ಕಂಥವರಿಗೆ ಯಾವ ರೀತಿ ಬರ ಬೇಕು, ಯಾವ ರೀತಿ ಓದಬೇಕು ಎನ್ನುವುದು ಒಂದು ದೊಡ್ಡ ಪ್ರಶ್ನೆಯಾಗಿರುತ್ತದೆ. ಇದರ ಬಗ್ಗೆ ವಿವರಣೆಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ. ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ ನಡೆದಂಥ ಕೃತ್ಯದ ಬಗ್ಗೆ ಮೂಲ ಭೂತವಾಗಿ ಏನು ಕ್ರಮವನ್ನು ತೆಗೆದುಕೊಂಡಿರುತ್ತೀರಿ ಎಂದು ಕೇಳುತ್ತಿದ್ದೇನೆ ಈವತ್ತು ಯಾರೋ ಒಬ್ಬರು ಇಬ್ಬರನ್ನು ಅರೆಸ್ಟ್ ಮಾಡಿದ್ದೇವೆಂದು ಮಾಡಿ ಅವರಿಗೆ ಕಾನೂನಿನ ಪ್ರಕಾರ ಕೇಸ್ ಹಾಕಿದರೂ ಕೂಡ ಆ ಒಂದು ಕೇಸ್ ನಿಲ್ಲುವುದಿಲ್ಲ. ರ‍್ಯಾಗಿಂಗ್ ಕೂಡ ನಿಲ್ಲುವುದಿಲ್ಲ.

ಎಲ್ಲ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸುತ್ತಾರೆಂದು ನಾವು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವರು ಒಳ್ಳೆಯವರು ಇರುತ್ತಾರೆ. ಕೆಲವುದುಷ್ಕರ್ಮಿಗಳು ಈ ರೀತಿಯ ಚಟುವಟಿಕೆಯನ್ನು ಇಟ್ಟುಕೊಂಡು ಅವರು ಈ ರೀತಿ ಕೆಲಸವನ್ನು ಮಾಡುತ್ತಿರುತ್ತಾರೆಂದು ತಿಳಿದುಬಂದಿದೆ. ಮತ್ತೆ ನಾನು ಹೇಳಬೇಕಾದರೆ ಇದು ರಾಜಕೀಯ ಪ್ರಶ್ನೆಯೂ ಅಲ್ಲ ಪಕ್ಷದ ಪ್ರಶ್ನೆಯೂ ಬರುವುದಿಲ್ಲ. ಈಗ ಇರುವ ಪ್ರಶ್ನೆ ಏನೆಂದರೆ ರ್ಯಾಗಿಂಗ್ ಯಾರು ಮಾಡುತ್ತಾರೆ ಅವರ ಬಗ್ಗೆ ತೀವ್ರವಾದ ಕ್ರಮ ಕೈಗೊಳ್ಳಬೇಕೆಂದು ಕಾನೂನು ತಂದರೂ ಕೂಡ ಅದು ಪ್ರಯೋಜನವಾಗುವುದಿಲ್ಲ ಅವರನ್ನು ಡಿಸ್‌ಮಿಸ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿರತಕ್ಕಂಥದ್ದು ಪತ್ರಿಕೆಗಳಲ್ಲೂ ಕೂಡ ಬಂದಿದೆ ಅಂಥವರನ್ನು ಡಿಸ್‌ಮಿಸ್ ಮಾಡಲೂಬೇಕು ವತ್ತು ಬೇರೆ ರೀತಿ ಕಾರ್ಯಕ್ರಮವನ್ನು ಕೂಡ ತೆಗೆದುಕೊಳ್ಳಬೇಕು. ಅಂಥವರು ಕಂಡಿತವಾಗಿಯೂ ಕಾಲೇಜಿನಲ್ಲಿ ಓದಲಿಕ್ಕೆ ಲಾಯಕ್ಕೂ ಕೂಡ ಇಲ್ಲ. ಅಂಥವರ ಬಗ್ಗೆ ಸರ್ಕಾರ ಒಂದು ಯೋಚಿತ ಕಾರ್ಯಕ್ರಮ ಹಾಕಿಕೊಳ್ಳತಕ್ಕಂಥದ್ದು ಬಹಳ ಅಗತ್ಯವಾಗಿರುತ್ತದೆ. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಮ್‌ದೇವ್. —ಮಾನ್ಯ ಅಧ್ಯಕ್ಷರೆ ನಿಯಮ ೫೫ರ ಕೆಳಗೆ ನಾನು ಕೂಡ ಒಂದು ನೋಟೀಸ್‌ನ್ನು ಕಳುಹಿಸಿಕೊಟ್ಟಿದ್ದೇನೆ. ಆ ಕಾಲೇಜು ನನ್ನ ಕ್ಷೇತ್ರದಲ್ಲಿ ಇರತಕ್ಕಂಥದ್ದಾಗಿರುತ್ತದೆ. ಅದು ಮಲ್ಲೇಶ್ವರಂ ಕ್ಷೇತ್ರದಲ್ಲಿ ಇರುತ್ತದೆ. ಮಾನ್ಯ ಗೃಹಮಂತ್ರಿಗಳು ಮುಖ್ಯಮಂತ್ರಿಗಳಾಗಿದ್ದಂತ ಕಾಲದಲ್ಲಿ ಆ ಕಾಲೇಜಿನಲ್ಲಿ ಒಂದು ಸಾಮೂ ಕೂಡ ಆಗಿತ್ತು.

ಅಧ್ಯಕ್ಷರು. —ನಿಯಮ ೫೫ಕ್ಕೆ ಮುಖ್ಯಮಂತ್ರಿ ಯಾರು ವಿಷಯದ ಮೇಲೆ ಹೋಗುವುದಿಲ್ಲ.

ಶ್ರೀ ಬಿ. ರಾಮ್‌ದೇವ. —ಅಂದು ಚರ್ಚೆ ನಡೆದಾಗ ಈ ಸದನದಲ್ಲಿ ಒಂದು ಅಭಿಪ್ರಾಯಕ್ಕೆ ಬಂದಿತ್ತು. ಅದನ್ನು ಕಡೆಗಟ್ಟುವ ಸಲುವಾಗಿ ಒಂದು ಶಾಸನವನ್ನೇ ತರಬೇಕೆಂದು ಕೂಡ ಅಭಿಪ್ರಾಯ ವ್ಯಕ್ತಪಡಿಸಿತ್ತು. ಆದರೆ ಇದುವರೆಗೂ ಅಂಥ ಶಾಸನ ಯಾವುದೂ ಬರಲಿಲ್ಲ. ಪದೇ ಪದೇ ಆಗ ತಕ್ಕಂಥ ಈ ಒಂದು ಕೃತ್ಯದಿಂದ ಹೊಸದಾಗಿ ಬರತಕ್ಕಂಥ ವಿದ್ಯಾರ್ಥಿಗಳಿಗೆ ಒಂದು ರೀತಿಯಾದ ಭಯದ ವಾತಾವರಣ ಉಂಟಾಗಿರುವುದರಿಂದ ಕಾಲೇಜುಗಳು ಸರಿಯಾಗಿ ನಡೆಯದೆ ಇರತಕ್ಕಂಥ ಸನ್ನಿವೇಶ ಕಾಣುತ್ತದೆ. ಈ ಸನ್ನಿವೇಶದಲ್ಲಿ ಮಾನ್ಯ ವಿದ್ಯಾಮಂತ್ರಿಗಳು, ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ತಿಳಿಸಬೇಕು, ಅವರ ಮೇಲೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಅವರನ್ನು ಡಿಸ್‌ಮಿಸ್ ಮಾಡುವುದೇ ತೀವ್ರವಾದ ಕಾರ್ಯಕ್ರಮವೆಂದು ನನ್ನ ಅಭಿಪ್ರಾಯವಾಗಿರುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ (ವಿದ್ಯಾಸಚಿವರು) —ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ದಿನಾಂಕ ೨೬-೧೧-೧೯೬೪ರ ರಾತ್ರಿ ೭-೩೦ಕ್ಕೆ ಮೂರು ಜನ ವಿದ್ಯಾರ್ಥಿಗಳು ದೂರನ್ನು ಕೊಟ್ಟಿರುತ್ತಾರೆ. ದೂರು ದೂರು ಕೊಟ್ಟಿರತಕ್ಕಂಥವರ ಹೆಸರು ಈ ರೀತಿ ಇರುತ್ತದೆ. ೧) ಅಜಯಕುಮಾರ್. ೨) ಪಂಕಜ್ ಗೋಯಲ್, ೩) ಸುಧೀರ್ ಅಗರ್‌ವಾಲ್.

ಶ್ರೀ ಎಂ. ಎಸ್. ಕೃಷ್ಣನ್. —ಇವರು ಯಾರು ಕರ್ನಾಟಕದವರಲ್ಲವೆಂದು ಹೇಳುತ್ತಿರಾ ?

ಶ್ರೀ ಬಿ. ರಾಚಯ್ಯ. —ಆರೋಪಿಗಳ ಹೆಸರು. ಈ ರೀತಿ ಇರುತ್ತದೆ ಏಪನ್‌ಕುಲಿ, ರಾಜೆ ಜ್ ಸೈಗಾಲ್, ನವೀನ್ ಚಂದ್ ಸಂತಾನಂ ಸಾರಸ್ವತ್, ಅನಿಲ್‌ಕುಮಾರ್ ಚತುರ್ವೇದಿ, ಉಪೇಂದ್ರ ಕುಮಾರ್ ತ್ಯಾಗಿ ರವೀಂದ್ರಕುಮಾರ್ ಸಿಂಗ್, ಎಂಬುದಾಗಿ ಮತ್ತೆ, ದಿನಾಂಕ ೫-೧೨-೧೯೬೪ರಲ್ಲಿರಂದು ಮತ್ತು ದಿನಾಂಕ ೬-೧೨-೬೪ರ ಬೆಳಗಿನಜಾವ ೧-೩೦ಕ್ಕೆ ದೂರನ್ನು ಕೊಟ್ಟವರ ಹೆಸರು ಈ ರೀತಿ ಇರುತ್ತದೆ ೧) ರಣಧೀರ್ ನಂದನ್, ೨) ವಿನೋದ್‌ಕುಮಾರ್ ಸಿಂಗ್, ೩) ಪ್ರಮೋದ್‌ಕುಮಾರ್, ೪) ಅಭಯ ಕುಮಾರ್, ೫) ಸಂಜಯ ಕುಮಾರ್, ೬) ದಿಗಂಬರ್‌ಪ್ರಸಾದ್ ಅಗರ್‌ವಾಲ್ ಎಂದು ಆರೋಪಿಗಳ ಹೆಸರು ಈ ರೀತಿ ಇರುತ್ತದೆ. ೧) ಸತ್ಯಪ್ರಕಾಶ್, ೨) ಅಭಯಕುಮಾರ್ ರಾಯ್. ೩) ದೇವೇಂದ್ರಪ್ರಸಾದ್, ೪) ಕೃಷ್ಣಕುಮಾರ್, ೫) ವಿನೋದ್‌ಕುಮಾರ್, ೬) ಸತ್ಯೇಂದ್ರ ಕುಮಾರ್ ಸಿಂಗ್, ೭) ಸುಧೀರ್‌ಕುಮಾರ್ ಸಿನಿದ್, ೮) ಬೀರೇಂದ್ರ ಸಿಂಗ್, ೯) ಬೀರೇಂದ್ರ ಕುಮಾರ್ ಸಿಂಗ್, ೧೦) ಓಂಪ್ರಕಾಶ್ ರಾಯ್, ೧೧) ರುದ್ರಪ್ರತಾಪ್ ಸಿಂಗ್, ೧೨) ಅಶೋಕ್‌ಕುಮಾರ್, ೧೩) ವಿನೋದ್

ಕಂಮಾರ್‌ಷಿನ್‌ಹ್, ೧೪) ಸತೀಶ್ ಚಂದ್ರ. ಎಂದು ಮತ್ತೆ ದಿನಾಂಕ ೭-೧೨-೮೪ರಳಿರ ಸಂಜೆ ೭-೩೦ಕ್ಕೆ ದೂರುಕೊಟ್ಟವರ ಹೆಸರು ರಾವಂ ಎಮರ್‌ಸನ್ ಇವಾನ್ಸ್ ಎಂದು, ಆರೋಪಿಗಳ ಹೆಸರು ಜಿ. ಬಾಬು ಜೋಸ್, ೨) ಟಿ. ಎನ್. ವೈದ್ಯನಾಥನ್ ಎಂಬುವಾಗಿರುತ್ತದೆ. ಬೆಂಗಳೂರು ಎಂ ಎಸ್. ರಾಮಯ್ಯ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ೨-೩-೪ನೇ ತರಗತಿಗಳಲ್ಲಿ ಓದುತ್ತಿರುವ ಹುಡುಗರು ಆದೇ ಕಾಲೇಜಿನ ಮೊದಲನೆಯ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳನ್ನು ಬೆದರಿಸಿ ಅವರ ಕೊಠಡಿಗಳಿಗೆ ನುಗ್ಗಿ ಅವರ ಬಟ್ಟೆಗಳನ್ನು ಬಿಚ್ಚಿಸಿ ಅಶ್ಲೀಲ ಶಬ್ದಗಳನ್ನು ಬೈದು ರ‍್ಯಾಗಿಂಗ್ ಮಾಡಿರುವ ವರದಿಯಾಗಿದೆ. ಈ ಮೂರು ಪ್ರಕರಣಗಳಲ್ಲಿಯೂ ಕೇಸ್‌ಗಳನ್ನು ಪೋಲೀಸ್‌ರವರು ದಾಖಲುಮಾಡಿಕೊಂಡಿದ್ದಾರೆ.

೧೫. ಎಂ.

ದಿನಾಂಕ ೨-೧೨-೮೪ರಳಿರಂದು ನಡೆದ ಪ್ರಕರಣದಲ್ಲಿ ಮೊದಲು ಹೇಳಿರುವ ಐದು ಜನ ಆರೋಪಿಗಳನ್ನು, ೬-೧೨-೮೪ರಳಿರಂದು ನಡೆದ ಪ್ರಕರಣದಲ್ಲಿ ಮೊದಲು ತೋರಿಸಿರುವ ೯ ಜನ ಆರೋಪಿಗಳನ್ನು ಮತ್ತು ೭-೧೨-೮೪ರಳಿ ರಂದು ನಡೆದು ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ. ಆರೋಪಿಗಳನ್ನು ನ್ಯಾಯಾಲಯದ ಮುಂದೆ ಸಹ ಹಾಜರು ಪಡಿಸಲಾಯಿತು. ತಲೆ ತಪ್ಪಿಸಿಕೊಂಡಿರುವ ಒಟ್ಟು ೭ ಜನ ಆರೋಪಿಗಳನ್ನು ದಸ್ತಗಿರಿ ಮಾಡಲು ಪೋಲೀಸ್‌ರು ಪ್ರಯತ್ನಿಸುತ್ತಿದ್ದಾರೆ.

ಬೆಂಗಳೂರು ವಿಶ್ವ ವಿದ್ಯಾನಿಲಯ ಸಹ ದಿನಾಂಕ ೧೧-೧೨-೮೪ರಳಿ ರಂದು ಈ ವಿಷಯವನ್ನು ಕಾಲೇಜುಗಳ ಪ್ರಿನ್ಸಿಪಾಲರೊಡನೆ ಚರ್ಚಿಸಿ ರ‍್ಯಾಗಿಂಗ್ ಮಾಡುವ ವಿದ್ಯಾರ್ಥಿಗಳನ್ನು ತಕ್ಷಣ ಕಾಲೇಜುಗಳಿಂದ ತನಿಪೆ ಮಾಡುವ ಸಲುವಾಗಿ ಅಮಾನತ್ತಿನಲ್ಲಿ ಇಟ್ಟು, ವರದಿಯನ್ನು ವಿಶ್ವ ವಿದ್ಯಾನಿಲಯಕ್ಕೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಬೇಕೆಂದು ತಿಳಿಸಿದೆ.

ಪೋಲೀಸಿನವರ ವರದಿಯ ಪ್ರಕಾರ ಕಾಲೇಜಿನವರು ಆರೋಪಿಗಳಾದ ವಿದ್ಯಾರ್ಥಿಗಳನ್ನು ೧೧-೧೨-೮೪ರಳಿ ರಿಂದ ಕಾಲೇಜಿನಿಂದ ಅಮಾನತ್ತಿನಲ್ಲಿಟ್ಟಿದ್ದಾರೆಂದು ತಿಳಿದು ಬಂದಿದೆ.

ಮೊದಲನೆಯ (ಹೊಸ) ವಿದ್ಯಾರ್ಥಿಗಳು ವಾಸವಾಗಿರುವ ಕಡೆಗಳಲ್ಲಿ ಪೋಲೀಸರು ಮುಂಜಾಗ್ರತಾ ಕ್ರಮವಾಗಿ, ಹೆಚ್ಚಿನ ಪಹರೆಯನ್ನು ಇಟ್ಟಿದ್ದಾರೆ. ಈಗ ಪರಿಸ್ಥಿತಿ ಶಾಂತವಾಗಿದ್ದು, ಮುಂದಿನ ಆಗು ಹೋಗುಗಳ ಬಗ್ಗೆ ಗಮನ ಇಡಲಾಗಿದೆ.

ಹಿರಿಯ ವಿದ್ಯಾರ್ಥಿಗಳ ಇಂತಹ ಅನಪೇಕ್ಷ ವರ್ತನೆ ಖಂಡನೀಯವಾಗಿದೆ. ಇಂತಹ ಪ್ರಸಂಗಗಳನ್ನು ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳಲು ಎಲ್ಲ ವಿಶ್ವ ವಿದ್ಯಾನಿಲಯಗಳಿಗೆ ಈ ಹಿಂದೆಯೇ ತಿಳಿಸಲಾಗಿದೆ. ಕೇಂದ್ರ ಸರ್ಕಾರದವರೂ ಈ ವಿಷಯದಲ್ಲಿ ಒಂದು ಕಾನೂನನ್ನು ಮಾಡುವ ವಿಚಾರ ಮಾಡುತ್ತಿದ್ದಾರೆ. ಈಗ ಸದನದ ಮುಂದೆ ಬರುವ ಶಿಕ್ಷಣ ಮಸೂದೆಯಲ್ಲೂ ಈ ವಿಚಾರದಲ್ಲಿ ಸೂಕ್ತ ನಿಯಮಗಳನ್ನು ತಿದ್ದುಪಡಿ ಮೂಲಕ ತರುವ ವಿಚಾರವೂ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಕೃಷ್ಣನ್.—ಸ್ವಾಮಿ, ಇದರ ಮೇಲೆ ಒಂದೆರಡು ಕ್ಲಾರಿಫಿಕೇಷನ್‌ಗಳನ್ನು ಕೇಳ ಬೇಕಾಗಿದೆ.

ಅಧ್ಯಕ್ಷರು.—ನಿಯಮ ೩೩ರಲ್ಲಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್. —ಈ ವಿಷಯದ ಬಗ್ಗೆ ಕಾನೂನು ತರುತ್ತಿದ್ದೇವೆಂದು ಹೇಳಿದರು ಆಂದರೆ ಅಲ್ಲಿಯವರೆಗೆ ಸುಮ್ಮನೆ ಕೂತಿರುತ್ತೀರಿ ಎಂದು ಹೇಳಿದಂತೆ ಆಗುತ್ತದೆ. ಇವರು ಮಕ್ಕಳಿಗೆ ಆಗಂತ್ತಿರುವ ತೊಂದರೆಯನ್ನು ತಪ್ಪಿಸಲು ಮಾಡಿದ್ದಾದರೂ ಏನು ? ಗೃಹ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಸಂಬಂಧಪಟ್ಟ ವಿದ್ಯಾರ್ಥಿಗಳನ್ನು ಈಗ ಕಾಲೇಜಿನಿಂದ ಸಸ್ಪೆಂಡ್ ಮಾಡಲಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಇಂತಹ ವಿದ್ಯಾರ್ಥಿಗಳನ್ನು ಕೂಡಲೇ ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಿ ಎಂದು ಹೇಳಲು ಇವರಿಗೆ ಅಧಿಕಾರ ಇಲ್ಲವೇ ? ಈ ರೀತಿ ಮಾಡಿದ್ದರೆ ಇಂತಹ ಪ್ರಕರಣಗಳು ಮತ್ತೆ ಮತ್ತೆ ನಡೆಯುತ್ತಿರಲಿಲ್ಲ. ನಾನಾ ವಿಷಯಗಳಿಗೆ ಸಂಬಂಧಪಟ್ಟಂತೆ ಆರ್ಡಿನೆನ್ಸ್ ಹೊರಡಿಸಿ

ದಂತೆ ಇದಕ್ಕೂ ಸಹ ಒಂದು ಆರ್ಡಿನೆನ್ಸ್ ಏತಕ್ಕೆ ಹೊರಡಿಸಬಾರದಾಗಿತ್ತು ? ಇದನ್ನು ಇವರು ಲಘುವಾಗಿ ಭಾವಿಸಿದ್ದಾರೆ. ಕಾಂಪ್ರಹೆನ್ಸಿವ್ ಬಿಲ್‌ನಲ್ಲಿ ಇದನ್ನು ಸೇರಿಸುತ್ತೇವೆಂದು ಇವರು ಹೇಳುತ್ತಿದ್ದಾರೆ. ಅಂದರೆ ಅಲ್ಲಿಯವರೆಗೆ ಇದು ನಡೆದುಕೊಂಡು ಹೋಗಲಿ ಎಂದು ಹೇಳಿದಂತೆ ಆಗುತ್ತದೆ.

ಶ್ರೀ ಬಿ. ರಾಚಯ್ಯ.—ಈ ಪ್ರಕರಣ ನಡೆದ ತಕ್ಷಣವೇ ಸಸ್ಪೆಂಡ್ ಮಾಡಿಸಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಡಿಸ್‌ಮಿಸ್ ಮಾಡಬೇಕು. ಇಂತಹವರನ್ನು ಮನೆಗೆ ಕಳುಹಿಸಬೇಕು

ಶ್ರೀ ಬಿ. ರಾಚಯ್ಯ —ತಾವು ಅಡ್ವೊಕೇಟ್ ಇದ್ದೀರಿ. ಅದ್ದರಿಂದ...

ಶ್ರೀ ಕೆ. ಎಚ್. ರಂಗನಾಥ್.—ಈ ವಿಚಾರ ಪತ್ರಿಕೆಗಳಲ್ಲಿ ಪ್ರಕಟವಾದ ಮೇಲೆ ತಮ್ಮ ಮನಸ್ಸಿನ ಮೇಲೆ ಏನೂ ಪರಿಣಾಮ ಬೀರಲಿಲ್ಲವೇ ?

ಶ್ರೀ ಬಿ. ರಾಚಯ್ಯ: ನಾವು ಕೂಡಲೇ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ತಪ್ಪು ಮಾಡಿದವರನ್ನು ದಸ್ತಗಿರಿ ಮಾಡಿದರೆ ಏನೂ ಪ್ರಯೋಜನವಿಲ್ಲ. ಈ ಶಾಲಾ ಕಾಲೇಜುಗಳನ್ನು ನಡೆಸತಕ್ಕಂಥ ಖಾಸಗಿ ಜನರ ಕಡೆ ಸಹ ತಾವು ನಿಗಾ ವಹಿಸಬೇಕಾಗುತ್ತದೆ. ಅಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ರಕ್ಷಣೆಯನ್ನು ಒದಗಿಸಬೇಕಾಗುತ್ತದೆ. ದುಡ್ಡು ಪಡೆದು ಸೀಟ್ ಕೊಟ್ಟರೆ ಅವರ ಜವಾಬ್ದಾರಿ ಮುಗಿಯಲಿಲ್ಲ. ಅವರು ವಿದ್ಯಾರ್ಥಿಗಳಿಯಾವ ರೀತಿ ರಕ್ಷಣೆ ಕೊಡಬೇಕೆಂಬುದನ್ನು ಸಹ ನೀವು ವಿಚಾರ ಮಾಡಬೇಕಾಗುತ್ತದೆ. ಇದರಲ್ಲಿ ವಿದಾಗೆ ಮಂತ್ರಿಗಳ ಜವಾಬ್ದಾರಿ ಜಾಸ್ತಿ ಇದೆ. ಅವರು ನಿಯಮ ಸಿಸಿಳರ ಪ್ರಕಾರ ಇಷ್ಟು ಮಾತ್ರ ಹೇಳಿ ಬಿಟ್ಟರೆ ಸಾಲುವುದಿಲ್ಲ.

ಶ್ರೀ ಬಿ. ರಾಚಯ್ಯ.—ನಾವು ಸೂಕ್ತ ಕ್ರಮ ಕೈಕೊಂಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ತಾವು ಬಿಗಿ ಕ್ರಮ ತೆಗೆದುಕೊಂಡಿದ್ದರೆ ಇದು ಮತ್ತೆ, ಮತ್ತೆ ನಡೆಯುತ್ತಿರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ರಂಗನಾಥ್ ಅವರು ಹೇಳುವುದರಲ್ಲಿ ಅರ್ಥವಿದೆ. ಇಂತಹ ಪ್ರಕರಣ ೩-೪ ಸಲ ನಡೆದಿದೆ.

ಶ್ರೀ ಕೆ. ಎಚ್. ರಂಗನಾಥ್.—ಈ ಅಸಹ್ಯ ವದ್ಧತಿಯನ್ನು ಹೋಗಲಾಡಿಸಬೇಕೆಂದು ಪತ್ರಿಕೆಯವರು ನಡೆದ ಸಂಗತಿಗಳನ್ನೆಲ್ಲಾ ವಿವರವಾಗಿ ಪ್ರಕಟ ಮಾಡಿದ್ದಾರೆ. ಆದರೂ ಈ ಸರ್ಕಾರದವಾಗಲೀ ಈ ವಿದ್ಯಾಮಂತ್ರಿಗಳಾಗಲೀ ಇದನ್ನು ಅರ್ಥ ಮಾಡಿಕೊಂಡಂತೆ ಕಾಣಲಿಲ್ಲ.

ಶ್ರೀ ಬಿ. ರಾಚಯ್ಯ.—ನಾನು ಹೋಗಿ ಅವರ ಕೆನ್ನೆಗೆ ಹೊಡೆಯಬೇಕೇ ?

SRI K. H. RANGANATH.—If you are not in a position to tackle the problem, you should resign and go away.

SRI B. RACHAIAH.—I have taken action.

ಶ್ರೀ ಕೆ. ಎಚ್. ರಂಗನಾಥ್.—ತಾವು ಪತ್ರಿಕೆಗಳಲ್ಲಿ ಬಂದಿರುವುದನ್ನು ಏನಾದರೂ ಓದಿದ್ದೀರಾ ? ನಿಮ್ಮ ಮಕ್ಕಳಿಗೇ ಈ ರೀತಿ ಆಗಿದ್ದರೆ ತಾವು ಏನು ಮಾಡುತ್ತಿದ್ದಿರಿ ? ಇದನ್ನು ತಾವು ಅಷ್ಟು ಲಘುವಾಗಿ ತೆಗೆದುಕೊಳ್ಳುವುದು ಸರಿಯಲ್ಲ.

SRI B. RACHAAH.—I want to dismiss them. But it has to be done according to rules.

SRI K. H. RANGANATH.—The Chief Minister will have to dismiss you.

SRI B. RACHAIAH.—I would welcome it. if you are capable of doing it, please do it.

ಶ್ರೀ ಜೆ. ಎಚ್. ಪಟೇಲ್.—ತವಂಗೆ ಏತಕ್ಕೆ ಅಷ್ಟು ಕೋಪ ?

ಶ್ರೀ ಕೆ. ಎಚ್. ರಂಗನಾಥ್.—ಇದು ಕೋಪದ ಪ್ರಶ್ನೆಯಲ್ಲ. ಪತ್ರಿಕೆಗಳಲ್ಲಿ ಬಂದ ಮೇಲೂ ಸಹ ಅವರ ಮನಸ್ಸಿನ ಮೇಲೆ ಏನೂ ಪರಿಣಾಮ ಬೀರಲಿಲ್ಲವಲ್ಲ ಎಂದು ತಾವು ಹೇಳಿದ್ದು.

ಶ್ರೀ ಜೆ. ಎಚ್. ಪಟೇಲ್.—ಆಗಿಲ್ಲ ಎಂದು ಏಕೆ ಹೇಳುತ್ತೀರಿ ? ಕೆಲವು ಕ್ರಮಗಳನ್ನು ತೆಗೆದು ಕೊಂಡಿರುವ ಬಗ್ಗೆ ಅವರು ಸ್ಟೇಟ್‌ಮೆಂಟ್ ಮಾಡಲಿಲ್ಲವೇ ?

ಶ್ರೀ ಬಿ. ರಾಚಯ್ಯ :—ನಾನೇನು ನಿದ್ದೆ ಮಾಡುತ್ತಿಲ್ಲ. ಎಲ್ಲ ಸರ್ಕಾರಿ ಮತ್ತು ಖಾಸಗೀ ಕಾಲೇಜು ಗಳವರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ನೀವು ತೆಗೆದುಕೊಂಡ ಕ್ರಮದ ಬಗ್ಗೆ ಈ ರಾಜ್ಯದ ಜನರೇ ನೋಡಿ ಕೊಳ್ಳಬೇಕು. ಏನು ಮಾಡಿದ್ದೀರಿ ಮತ್ತು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಜನರು ಎದುರು ನೋಡುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ನೀವು ಮಾಡಿರುವುದನ್ನು ಸಹ ಜನರು ನೋಡಿದ್ದಾರೆ.

(ಗಲಾಟೆ)

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಈ ಹಿಂದೆಯೇ ಈ ಬಗ್ಗೆ ಬಿಗಿ ಕ್ರಮ ತೆಗೆದುಕೊಂಡಿದ್ದರೆ ಈಗ ಮತ್ತೆ ಇದು ನಡೆಯುತ್ತಿರಲಿಲ್ಲ. ಇದನ್ನು ತಡೆಗಟ್ಟಲು ತಮ್ಮ ಕಾಲದಲ್ಲಿ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ?

(ಗಲಾಟೆ)

ಅಧ್ಯಕ್ಷರು —ಸಿಸಿಲರ ನಿಯಮದ ಪ್ರಕಾರ ಇದನ್ನು ಎಷ್ಟು ದೂರ ತೆಗೆದುಕೊಂಡು ಹೋಗ ಬಹುದು ಎಂಬುದನ್ನು ತಾವುಗಳು ತೀರ್ಮಾನ ಮಾಡುವುದು ಒಳ್ಳೆಯದು. ತಮ್ಮ ಫೀಲಿಂಗ್ಸ್ ಏನು ಎಂಬುದನ್ನು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಂಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ತಮ್ಮ ಮಂಕ್ಕಳಿಗೆ ರಕ್ಷಣೆ ಇದೆ ಎಂದು ತಂದೆ ತಾಯಿಗಳು ಮಂಕ್ಕಳನ್ನು ಶಾಲಾ ಕಾಲೇಜುಗಳಿಗೆ ಕಳುಹಿಸುತ್ತಿದ್ದಾರೆ. ಆದರೆ ಈ ರೀತಿ ನಡೆದರೆ ಏನು ಮಾಡಬೇಕು ? ಇದಮ್ಮ ಸರ್ಕಾರದವರು ಯೋಚನೆ ಮಾಡಬೇಕು.

(ಗಲಾಟೆ)

ಶ್ರೀ ಬಿ. ಸೋಮಶೇಖರ್.—ಈ ಹಿಂದೆ ಇವರ ಸರ್ಕಾರ ಅಧಿಕಾರದಲ್ಲಿದ್ದಾಗ ೧೩೦ ಜನ ರೈತರನ್ನು ಗುಂಡಿಟ್ಟು ಕೊಂದಾಗ ಇವರ ಮನಸ್ಸಿನ ಮೇಲೆ ಏನು ಪರಿಣಾಮ ಬೀರಿತು ಎಂಬುದನ್ನು ಈಗ ಹೇಳಲಿ.

(ಗಲಾಟೆ)

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್.—ನಾನು ಶ್ರೀಮಾನ್ ರಾಚಯ್ಯನವರನ್ನು ಸುಮಾರು ೪೫ ವರ್ಷ ಗಳಿಂದ ನೋಡಿದ್ದೇನೆ.

ಶ್ರೀ ಬಿ. ಸೋಮಶೇಖರ್.—ನಾನು ಕೂಡ ನಿಮ್ಮನ್ನು ಸುಮಾರು ೧೦ ವರ್ಷಗಳಿಂದ ನೋಡಿದ್ದೇನೆ.

(ಗೊಂದಲ)

ಅಧ್ಯಕ್ಷರು. —ಸುಮಾರು ಹನ್ನೆರಡು ಜನ ನಿಯಮ ೫೫ರ ಪ್ರಕಾರ ನೋಟೀಸ್ ಕೊಟ್ಟಿದ್ದಾರೆ. ತಾವು ಒಂದು ನೋಟೀಸಿನ ಬಗ್ಗೆ ಇಷ್ಟು ಸಮಯ ತೆಗೆದುಕೊಂಡರೆ ಹೇಗೆ ? ತಮ್ಮ ಅಭಿಪ್ರಾಯದ ಪ್ರಕಾರ ಎಲ್ಲಾ ನೋಟೀಸ್‌ಗಳನ್ನು ಬಿಟ್ಟುಬಿಡೋಣವೇ ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಮಾನ್ಯ ಅಧ್ಯಕ್ಷರೇ.....

SRI MANIK RAO PATIL.—Sir, we are observing. There must be some limit.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಿದರೆ ಒಳ್ಳೆಯದು. ಶ್ರೀಮಾನ್ ಬಂಗಾರಪ್ಪನವರು ಮಾನ್ಯ ಸದಸ್ಯರಿಗೆ ಸ್ವಲ್ಪ ಹೇಳಿದರೆ ಒಳ್ಳೆಯದು.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ವೇಳೆ ಮಾನ್ಯ ಸದಸ್ಯರು ಇಂಗ್ಲೀಷ್‌ನಲ್ಲಿ ಮಾತನಾಡಿದ್ದರೆ ಕನ್ನಡದಲ್ಲಿ ಮಾತನಾಡುವಂತೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಹೇಳಿ ಕೊಟ್ಟಿದ್ದಾರೆ. ತುಂಬಾ ಒಳ್ಳೆಯದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಯಾವುದೇ ಆಕ್ಷೇಪದ ಮಾತನ್ನು ಸಹ ಹೇಳಲಿಲ್ಲ. ಆದರೆ ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ವಿಶ್ವನಾಥರೆಡ್ಡಿಯವರು ಮಾತನಾಡುವಾಗ ಮಾತ್ರ ಶ್ರೀಮಾನ್ ಬಂಗಾರಪ್ಪನವರು ಕನ್ನಡದಲ್ಲಿ ಮಾತನಾಡಬೇಕೆಂದು ಎಚ್ಚರಿಸಿದರು ಆದರೆ ಮಾನ್ಯ ಮಂತ್ರಿಗಳು ಸಹ ಹೈದ್ರಾಬಾದ್ ಕರ್ನಾಟಕದಿಂದ ಬಂದವರು. ಅವರು ತಮ್ಮ ಮನೆಯಲ್ಲಿ ಉರ್ದು ಮತ್ತು ಹಿಂದಿಯಲ್ಲಿ ಮಾತನಾಡುತ್ತಾರೆ. ಆದ್ದರಿಂದ ಅವರಿಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಸರಿಯಾಗಿ ಬರುವುದಿಲ್ಲ. ಆದರೂ ಸಹ ಕಷ್ಟ ಪಟ್ಟು ಮಾತನಾಡಿದ್ದಾರೆ. ಆಗ ಶ್ರೀಮಾನ್ ಬಂಗಾರಪ್ಪನವರು ಬಹಳ ಉಗ್ರವಾಗಿ ಖಂಡಿಸಿದ್ದಾರೆ. ಆದರೆ ಅವರ ಪಕ್ಷದ ಸದಸ್ಯರು ಇಂಗ್ಲೀಷ್‌ನಲ್ಲಿ ಮಾತನಾಡುವಾಗ ಏತಕ್ಕೆ ಸುಮ್ಮನೆ ಇದ್ದರೋ ನನಗಂತೂ ಗೊತ್ತಾಗಲಿಲ್ಲ. ಅವರು ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಏತಕ್ಕೆ ಇಡುತ್ತಿದ್ದಾರೆ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಂಗನಾಥ್‌ರವರು ರ್ಯಾಗಿಂಗ್ ಬಗ್ಗೆ ಒಂದು ಮಾತನ್ನು ಹೇಳಿದರು ಅದು ಏನೆಂದರೆ ಅವರ ಸಂಸ್ಥೆಯಲ್ಲಿ ಉಂಟಾದಂಥ ಒಂದು ಆಕ್ಸಿಡೆಂಟ್ ಘಾತನೆಯಿಂದ ಅವರು ಆ ರೀತಿ ಮಾತನಾಡಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರವನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡಿರೋ ಇಲ್ಲವೋ ನನಗಂತೂ ಅರ್ಥವಾಗಿಲ್ಲ. ಈಗ ಎಂ ಎಸ್. ರಾಮಯ್ಯ ಕಾಲೇಜಿನಲ್ಲಿ ನಡೆದಿರತಕ್ಕಂಥ ಘಟನೆಯನ್ನು ಎಲ್ಲರೂ ಸಹ ಖಂಡಿಸಲೇ ಬೇಕಾದಂಥ ವಿಷಯ. ಸಾಮಾನ್ಯವಾಗಿ ಆ ಕಾಲೇಜಿನಲ್ಲಿರತಕ್ಕಂಥ ಎಲ್ಲಾ ವಿದ್ಯಾರ್ಥಿಗಳು ಉತ್ತರ ಭಾರತದಿಂದ ಬಂದಿರತಕ್ಕಂಥವರು. ಅವರು ಅಲ್ಲಿ ವರ್ತಿಸಿರತಕ್ಕಂಥ ರೀತಿ ಬಹಳ ಅನಾಗರೀಕತೆಯಿಂದ ಕೂಡಿದೆ. ಸಾಮಾನ್ಯವಾಗಿ ದಪಹಲಿಯಲ್ಲಿ ಕೂಡ ಇಂಥ ಘಟನೆಗಳು ನಡೆಯುತ್ತಿರುತ್ತವೆ. ಮತ್ತೆ ಪಟ್ನಾದಲ್ಲಿ ಕೂಡ ಇಂಥ ಘಟನೆಗಳು ನಡೆಯುತ್ತಿರುತ್ತವೆ. ಮತ್ತೆ ಅಲಹಾಬಾದ್‌ನಲ್ಲಿ ಕೂಡ ಸಾಕಷ್ಟು ಇಂಥ ಘಟನೆಗಳು ನಡೆದಿವೆ. ಅಲ್ಲಿ ವಿದ್ಯಾರ್ಥಿಗಳ ಕೈ ಮತ್ತು ಕಾಲುಗಳನ್ನು ಮುರಿದು ಹಾಕಿರತಕ್ಕಂಥ ಘಟನೆಗಳು ಕೂಡ ನಡೆದಿವೆ. ಸರ್ಕಾರ ಇದಂತರಿಗೂ ಯಾವ ಶಾಶ್ವತವಾದ ಕ್ರಮವನ್ನು ಸಹ ತೆಗೆದುಕೊಂಡಿಲ್ಲವೆಂದು ಹೇಳುವುದು ಸರಿಯಾಲ್ಲ. ಮಾನ್ಯ ಮಂತ್ರಿಗಳು ಹೇಳಿದ್ದನ್ನು ತಾವು ಸ್ವಲ್ಪ ಸಂಯಮದಿಂದ ಕೇಳಬೇಕು. ಮಾನ್ಯ ಮಂತ್ರಿಗಳು ಬಹಳ ಸಂಯಮದಿಂದ ಹೇಳಿದರು ಏನೆಂದರೆ ಅವರನ್ನು ಈಗಾಗಲೇ ನಾವು ಸಸ್‌ಪೆಂಡ್ ಮಾಡಿದ್ದೇವೆಂದು. ಆದರೆ ತಾವು ಡಿಸ್‌ಮಿಸ್ ಮಾಡಿ ಎಂದು ಹೇಳಿದರೆ ಹೇಗೆ ?

ಶ್ರೀ ಕೆ.ಹೆಚ್. ರಂಗನಾಥ್. ಸ್ವಾಮಿ, ನಾನು ಹೇಳಿದ್ದು ಏನೆಂದರೆ ಡಿಸ್‌ಮಿಸ್ ಏತಕ್ಕೆ ಮಾಡಬಾರದೆಂದು ಕೇಳಿದೆ ಅಷ್ಟೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮಾತನಾಡಿ ಮುಂಗಡದ ಮೇಲೆ ಬೇಕಾದರೆ ತಾವು ಮಾತನಾಡಿ.

ಶ್ರೀ ಕೆ ಹೆಚ್. ರಂಗನಾಥ್—ಮಾನ್ಯ ಮುಖ್ಯಮಂತ್ರಿಗಳು ಬಹಳ ಜಾಣರು ಇರಬಹುದು, ಆದರೆ ನಾನು ಸುಮ್ಮಸ್ಸು ಜಾಣನಲ್ಲದಿರಬಹುದು ಆದರೆ ಮಾನ್ಯಮಂತ್ರಿಗಳು ಹೇಳಿದ್ದನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ಮಾನ್ಯಮಂತ್ರಿಗಳು ಹೇಳಿದ್ದು ಏನೆಂದರೆ ಸಮಗ್ರ ಶಿಕ್ಷಣ ಮಂಸೂದೆಯನ್ನು ತರುವವರಿದ್ದೇವೆ ಅದರಲ್ಲಿ ಈ ಇದರ ಬಗ್ಗೆ ಅಳವಡಿಸಿದ್ದೇವೆಂದು ಹೇಳಿದರು. ಅದಕ್ಕೆ ನಾನು ಆ ರೀತಿ ಮಾತನಾಡಿದ್ದು. ಮತ್ತೆ ಸಂಬಂಧಪಟ್ಟ ಕಾಲೇಜಿನ ಪ್ರಿನ್ಸಿಪಾಲರನ್ನು ಕರೆಸಿ ಅವರ ಜೊತೆಯಲ್ಲಿ ಮಾತನಾಡಿ ಆ ವಿದ್ಯಾರ್ಥಿಗಳನ್ನು ಏತಕ್ಕೆ ಸಸ್‌ಪೆಂಡ್ ಮಾಡಬಾರದು ? ಮತ್ತೆ ಡಿಸ್‌ಮಿಸ್ ಸಹ ಮಾಡಬಹುದಿತ್ತು ಎಂದು ಹೇಳಿದೆ. ಸರ್ಕಾರದವರು ಆ ವಿದ್ಯಾರ್ಥಿಗಳನ್ನು ಅರೆಸ್ಟ್ ಮಾತ್ರ ಮಾಡಿದ್ದಾರೆ. ಅವರ ಬಗ್ಗೆ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಒಂದೇ ಸಾರಿ ರ್ಯಾಗಿಂಗ್ ನಡೆದಿರುವುದು ಅಲ್ಲ. ಸುಮಾರು ಮೂರು ಸಾರಿ ರ್ಯಾಗಿಂಗ್ ನಡೆದಿದೆ. ಆದ್ದರಿಂದ ನಾನು

ನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದೇನೆ. ನಾನು ನಿಮ್ಮಷ್ಟು ಜಾಣನಲ್ಲದಿದ್ದರೂ ಪರವಾಗಿಲ್ಲ, ನಾನು ಸ್ವಲ್ಪ ದಡ್ಡನಿರಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಹೇಳಿದ್ದಾರೆ. ಕನ್ನಡದಲ್ಲಿ ಮಾತನಾಡುವಂಥ ವಿಚಾರದಲ್ಲಿ ಯಾರೂ ಪಕ್ಷಪಾತವನ್ನು ಮಾಡುವುದ್ದು ಸರಿಯಲ್ಲ. ಮಾನ್ಯ ಪಶುಸಂಗೋಪನಾ ಮಂತ್ರಿಗಳು ಮಾತನಾಡುವಂಥ ಸಂದರ್ಭದಲ್ಲಿ ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೆವು. ಆದರೆ ಅವರಿಗೆ ಕನ್ನಡದ ಬಗ್ಗೆ ಅಭಿಮಾನವಿಲ್ಲವೆಂದು ನಾನು ಹೇಳಿಲಿಲ್ಲ. ಅವರೂ ಕೂಡ ಹೈದ್ರಾಬಾದ್ ಕರ್ನಾಟಕದಿಂದ ಬಂದವರು. ಪಂತ್ ಮಾಣಿಕ್ಯ ನಾವ್ ಪಾಟೀಲ್‌ರವರು ಸಹ ಹೈದ್ರಾಬಾದ್ ಕರ್ನಾಟಕದಿಂದ ಬಂದವರು. ಆದರೆ ಮಾನ್ಯ ಸದಸ್ಯರು ಕಂಗ್ಲೀಷ್‌ನಲ್ಲಿ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಗಮನಿಸಿ ಚುರುಕಿನಿಂದ ಕನ್ನಡದಲ್ಲಿ ಮಾತನಾಡುವಂತೆ ತಿಳಿಸಿದ್ದಾರೆ,

ಶ್ರೀ ವೆಂಕಟೇಲ್ ಬಿ. ಫರ್ನಾಂಡೀಸ್.—ಅವರು ಚುರುಕಿನಿಂದ ಇರುವುದರಿಂದಲೇ ಅವರು ಮುಖ್ಯಮಂತ್ರಿಯಾಗಿರುವುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಬಹಳ ಚುರುಕು ಬುದ್ಧಿಯಿಂದ ಗಮನಿಸಿ ಹೇಳಿದ್ದಾರೆ ನನಗೆ ಬಹಳ ಸಂತೋಷ. ಆದರೆ ಶ್ರೀಮಾನ್ ರಾಚಯ್ಯನವರ ಬಗ್ಗೆ ಏನೂ ತೀರ್ಮಾನವಾಗಿಲ್ಲವೆಂದು ಹೇಳಿದ್ದಾರೆ. ಆದರೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಂಗನಾಥ ರವರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆ ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳವರು ಆ ಮಂತ್ರಿಯನ್ನು ಸಸ್‌ಪೆಂಡ್ ಮಾಡಿ ಮನೆಗೆ ಕಳುಹಿಸಲಿ ಎಂದು ಹೇಳಿದ್ದಾರೆ. ಅದನ್ನು ತಾವು ಪರಿಶೀಲನೆ ಮಾಡಿದರೆ ಒಳ್ಳೆಯದು.

ಬಾಗಲಕೋಟೆ ಸಿಮೆಂಟ್ ಕಾರ್ಖಾನೆಯ ಕೆಲಸಗಾರರಿಂದ ಮುಷ್ಕರದ ಬಗ್ಗೆ

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಇವತ್ತು ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಯ ಕೆಲಸಗಾರರು ೧೯-೧೨-೮೯ರಿಂದ ಸುಮಾರು ೫೫ ಜನರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅವರು ಸತ್ಯಾಗ್ರಹವನ್ನು ಮಾಡಲು ಪ್ರಾರಂಭ ಮಾಡಿ ಸುಮಾರು ೩೦ ದಿನಗಳಿಗೆ ಮೀರಿದೆ. ಆದರೆ ಅವರು ಈಗ ಮರಣಹೊಂದುವ ಪರಸ್ಥಿತಿಯಲ್ಲಿದ್ದಾರೆಂದು ಹೇಳಿದರೂ ಅತಿಶಯೋಕ್ತಿಯಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿ ಕೊಂಡು ಅವರಿಗೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ೧೯೮೩ರ ಜನವರಿಯಲ್ಲಿ ಆ ಕೆಲಸಗಾರರ ಸಂಘದ ಅಧ್ಯಕ್ಷರಾಗಿರತಕ್ಕ ಶ್ರೀ ಎಸ್. ಬಿ. ಪಾಟೀಲ್‌ರವರು ಉಪವಾಸ ಕ್ರಮ ಕೈಗೊಂಡಾಗ, ಆಗ ಜಾನೇ ಅಧಿಕಾರವಹಿಸಿಕೊಂಡಿದ್ದ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಮತ್ತು ಹಿಂದಿನ ಕಾರ್ಮಿಕ ಮಂತ್ರಿಗಳಾದ ಶ್ರೀ ವಿ. ಎಲ್. ಪಾಟೀಲ್‌ರವರು ಕೆಲಸಗಾರರ ಸಮಸ್ಯೆಗಳನ್ನು ಬಗೆ ಹರಿಸು ತ್ತೇವೆಂದು ಹೇಳಿ, ಮಾಡುತ್ತಿದ್ದ ಉಪವಾಸವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಬೇಡಿದರು. ಅವರು ಹೇಳಿದ ಮಾತಿಗೆ ಮಾನ್ಯತೆಯನ್ನು ಕೊಟ್ಟು ಉಪವಾಸ ಸತ್ಯಾಗ್ರಹವನ್ನು ಕೈಬಿಟ್ಟರು. ಮಾನ್ಯ ಅಜೀಜ್‌ಸೇಠ್‌ರವರು ಹೊಸದಾಗಿ ಕಾರ್ಮಿಕ ಮಂತ್ರಿಗಳಾದ ಮೇಲೆ ಕಾರ್ಮಿಕ ಪ್ರತಿನಿಧಿಗಳು ಮತ್ತು ಆ ಭಾಗದ ಶಾಸಕರುಗಳ ತುರ್ತು ಸಭೆಯನ್ನು ಕರೆದು ಎರಡು ದಿವಸ ಚರ್ಚೆ ನಡೆಸಿದರು. ಎರಡು ದಿವಸ ಸಭೆ ನಡೆಸಿದರೂ ಯಾವುದೇ ರೀತಿಯ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಲಿಕ್ಕೆ ಅಜೀಜ್‌ಸೇಠ್‌ರವರಿಂದಾಗಲೀ ಸರ್ಕಾರದ ಅಧಿಕಾರಿಗಳಿಂದಾಗಲೀ ಸಾಧ್ಯವಾಗಲಿಲ್ಲ. ಇದಾದ ನಂತರ ಜಾಯಿಂಟ್ ಕನ್ಸಿಲಿಯೇಷನ್ ಕಮಿಟಿಯನ್ನು ಕರೆದರು, ಅದರ ವರದಿ ಕೂಡ ಸರ್ಕಾರದ ಮುಂದಿದೆ. ಅಂದಿನಿಂದ ಇವತ್ತಿನವರೆಗೂ ಸತತವಾಗಿ ಮ್ಯಾನೇಜ್‌ಮೆಂಟ್‌ನವರ ಜೊತೆಯಲ್ಲಿ ಕಾರ್ಮಿಕರು ಹೋರಾಟ ಮಾಡಿಕೊಂಡು ಬಂದಿದ್ದಾರೆ. ಕಾರ್ಮಿಕರ ನ್ಯಾಯಯುತವಾದ ಬೇಡಿಕೆಗಳನ್ನು ಚರ್ಚೆಮಾಡುವುದಕ್ಕೆ ಮ್ಯಾನೇಜ್‌ಮೆಂಟ್‌ನವರು ಬರುತ್ತಿಲ್ಲ. ಒಂದು ವರ್ಷದ ನಿಷ್ಕ್ರಿಯಾವಧಿಯಲ್ಲಿ ಮ್ಯಾನೇಜ್‌ಮೆಂಟ್ ನವರನ್ನು ಕರೆಸಿ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುವುದಕ್ಕೆ ಆಗಿಲ್ಲ.ಮ್ಯಾನೇಜ್‌ಮೆಂಟ್‌ನವರನ್ನು